# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂ.32/2017

ಸಿಡಬ್ಲ್ಯೂ-7 ಪಿಡಬ್ಲ್ಯೂ-3

| | |
|---|---|
| ಹೆಸರುಃ | ಶ್ರೀ ಬಸವರಾಜ |
| ತಂದೆಯ ಹೆಸರುಃ | ಶಂಕ್ರಪ್ಪ ಇಟಗಿ |
| ವಯಸ್ಸುಃ | 53 ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸ ಸ್ಥಳಃ | ಹಂಚಿಲಿ, ತಾಃ ಸಿಂದಗಿ, ಜಿ. ವಿಜಯಪುರ |

ದಿನಾಂಕ 12-12-2022

ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಚಾಸಾ-4 ಇವರ ಪರಿಚಯ ಇರುತ್ತದೆ. ಆರೋಪಿಯ ಪರಿಚಯ ಇಲ್ಲ. ಈ ಹಿಂದೆ ಆರೋಪಿಯನ್ನು ಎಲ್ಲಿಯೂ ನೋಡಿಲ್ಲ. ಮೃತ ಯಲ್ಲಪ್ಪ ನನಗೆ ಅಳಿಯನಾಗಬೇಕು. 2017 ನೇ ಸಾಲಿನಲ್ಲಿ ರಾತ್ರಿ 09.30 ಗಂಟೆಗೆ ನಾನು ಹಂಚಿಲಿ ಗ್ರಾಮದಲ್ಲಿ ಇದ್ದಾಗ ಒಬ್ಬರೂ ನನಗೆ ಫೋನ ಮಾಡಿ ಒಂದು ಡಂಪರ ವಾಹನ ಮುಂದೆ ಸಾಗುತ್ತಿರುವಾಗ ವಾಹನವನ್ನು ದ್ವಿಚಕ್ರ ವಾಹನಕ್ಕೆ ಹಾಯಿಸಿ ಅಪಘಾತಪಡಿಸಿರುವುದಾಗಿ ವಿಷಯ ಗೊತ್ತಾಗಿರುತ್ತದೆ. ಹಿಟಾಚಿ ವಾಹನವನ್ನು ಯಾರು ನಡೆಸುತ್ತಿದ್ದರು, ಯಾರು ನಡೆಸುತ್ತಿದ್ದರು, ಹೇಗೆ ನಡೆಸುತ್ತಿದ್ದರು ಎಂದು ನನಗೆ ಯಾರು ಹೇಳಿಲ್ಲ. ಆಗ ನಾನು ಮತ್ತು ಚಾಸಾ-1 ಹಾಗೂ ರೇವಣಸಿದ್ದಪ್ಪ ಕೂಡಿಕೊಂಡು ಅಪಘಾತ ಸ್ಥಳಕ್ಕೆ ಹೋಗಿರುತ್ತೇವೆ. ಅಪಘಾತ ಸ್ಥಳ ಹೊಸಕೇರಿ ರೋಡ ಇದ್ದು ಅಲ್ಲಿ ಹೋಗಿ ನೋಡಿದಾಗ ಯಲ್ಲಪ್ಪ ಸ್ಥಳದಲ್ಲಿ ಇದ್ದು, ಆತ ಬದುಕಿರಲಿಲ್ಲ. ಅವರಿಗೆ ತಲೆಗೆ ಮತ್ತು ಕೈಗೆ ಪೆಟ್ಟಾಗಿತ್ತು. ಟಿಪ್ಪರ ಚಾಲಕ ಅಲ್ಲಿ ಸ್ಥಳದಲ್ಲಿ ಇರಲಿಲ್ಲ. ನಂತರದಲ್ಲಿ ಪೊಲೀಸರು ಸ್ಥಳಕ್ಕೆ ಬಂದಿದ್ದು, ಯಲ್ಲಪ್ಪ ಇತನನ್ನು ಸರಕಾರಿ ಆಸ್ಪತ್ರೆಗೆ ಸಾಗಾಟ ಮಾಡಿರುತ್ತೇವೆ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇವೆ. ಅಪಘಾತ ಆದಾಗ ಸಮಯ ರಾತ್ರಿ 08.30 ಆಗಿತ್ತು. ಟಿಪ್ಪರ ವಾಹನದ ನಂಬರ ಹೇಳಲು ಬರುವುದಿಲ್ಲ. ಯಲ್ಲಪ್ಪ ಇತ ತೆಗೆದುಕೊಂಡು ಹೊರಟಿದ್ದ ಮೋಟಾರ ಸೈಕಲ ನಂಬರ ಹೇಳಲು ಬರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಘಟನೆಯ ಕುರಿತು ನನಗೆ ದಿನಾಂಕ 28.11.2016 ರಂದು ರಾತ್ರಿ 09.00 ಗಂಟೆಗೆ

ದೇವರಾಜ ಇವರಿಂದ ಪೋನ ಮೂಲಕ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಅವರು ಪೋನದಲ್ಲಿ ಚಂದ್ರಶೇಖರ ಮತ್ತು ಯಲ್ಲಪ್ಪ ಕೂಡಿ ಕೆಲಸ ಮುಗಿಸಿಕೊಂಡು ಹಿಟಾಚಿ ತೆಗೆದುಕೊಂಡು ಬೇರೆ ಸೈಟಗೆ ಹೋಗುತ್ತಿದ್ದೇವು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಯಲ್ಲಪ್ಪ ಇತ ದ್ವಿಚಕ್ರ ವಾಹನದ ಮೇಲೆ ಹಿಟಾಚಿ ವಾಹನದ ಮುಂದುಗಡೆ ಬೆಳಕಿನಲ್ಲಿ ಹೋಗುತ್ತಿದ್ದರು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯೇ ಆ ದಿವಸ ಹಿಟಾಚಿ ವಾಹನವನ್ನು ಅತೀ ವೇಗದಿಂದ ಮತ್ತು ನಿರ್ಲಕ್ಷತನದಿಂದ ನಡೆಸುತ್ತಾ ಬಂದು ಯಲ್ಲಪ್ಪ ಇತನ ಮೋಟಾರ ಸೈಕಲಗೆ ಡಿಕ್ಕಿಪಡಿಸಿರುತ್ತಾನೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಹಿಟಾಚಿ ಟಿಪ್ಪರ ನಂಬರ KA-32 C-5379 ಹಾಗೂ ಮೊಟಾರ ಸೈಕಲ ನಂ.KA-33 J-2042 ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ದುಡುಕುತನದ ವಾಹನ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಹೆಚ್. ಎಲ್. ಎ. ಆರೋಪಿ ಪರ ವಕೀಲರಿಂದ**

ಏನು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH*